ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
Rajiv Gandhi University of Health Sciences, Karnataka
4th 'T' Block, Jayanagar, Bangalore - 560 041

RGU/Auth/Notification/174th (1)/161/2022-23

31.12.2022

# ಅಧಿಸೂಚನೆ

ವಿಷಯ: ವಿದ್ಯಾರ್ಥಿಗಳು ಹಾಗೂ ಕಾಲೇಜುಗಳು ವಿಶ್ವವಿದ್ಯಾಲಯಕ್ಕೆ ಶುಲ್ಕ ಮರುಪಾವತಿಗೆ ಅರ್ಜಿ ಸಲ್ಲಿಸಿದಾಗ ಕೈಗೊಳ್ಳಬೇಕಾದ ಕ್ರಮಗಳು.

ಉಲ್ಲೇಖ: 174ನೇ ಸಿಂಡಿಕೇಟ್ ಸಭೆಯ ನಡವಳಿ ದಿನಾಂಕ 20.10.2022

ಉಲ್ಲೇಖಿತ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿರುವಂತೆ, ಕಾಲೇಜುಗಳು ಅಥವಾ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ವಿವಿಧ ಶುಲ್ಕಗಳನ್ನು ಆನ್‌ಲೈನ್ ಮುಖಾಂತರ ಪಾವತಿ ಮಾಡುವಾಗ, ಕೆಲವು ಸಮಯದಲ್ಲಿ ಒಂದೇ ವಿಷಯಕ್ಕೆ ಒಂದಕ್ಕಿಂತ ಹೆಚ್ಚು ಬಾರಿ ಪಾವತಿ ಮಾಡಿ, ನಂತರ ಮರುಪಾವತಿಗಾಗಿ ಅರ್ಜಿ ಸಲ್ಲಿಸಿದಾಗ ಕೈಗೊಳ್ಳಬೇಕಾಗಿರುವ ಕ್ರಮಗಳನ್ನು ಕೆಳಕಂಡಂತೆ ಅಧಿಸೂಚಿಸಲಾಗಿದೆ.

## ಸಂದರ್ಭ–1:-

ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಪರೀಕ್ಷಾ ಶುಲ್ಕ, ಪ್ರವೇಶಾತಿ ಶುಲ್ಕ, ಸಂಯೋಜನಾ ಶುಲ್ಕ ಹಾಗು ಇತರೆ ಶುಲ್ಕಗಳ ಹಣವನ್ನು ಪಾವತಿ ಮಾಡುವ ಸಂದರ್ಭದಲ್ಲಿ ತಾಂತ್ರಿಕ ದೋಷದಿಂದ ಅಥವಾ ಇಂಟರ್‌ನೆಟ್ ದೋಷದಿಂದ ಹಣ ಪಾವತಿಯ ವಿವರ ಬಾರದೆ ತಡವಾದ ಸಂದರ್ಭದಲ್ಲಿ ಎರಡನೇ ಬಾರಿ ಅಥವಾ ಮೂರನೇ ಬಾರಿ ಒಂದೇ ವಿಷಯಕ್ಕೆ ಹಣ ಪಾವತಿ ಮಾಡಿರುವುದು ಕಂಡುಬಂದಲ್ಲಿ, ಹೆಚ್ಚುವರಿ ಹಣ ಪಾವತಿ ಮಾಡಿದ ಮೊತ್ತವನ್ನು ಮರು ಪಾವತಿ ಮಾಡಲು ಕೆಳಗೆ ವಿವರಿಸಿರುವಂತೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

1) ಸದರಿ ವಿದ್ಯಾರ್ಥಿಗಳು ಹಣ ಮರುಪಾವತಿ ಮಾಡಿಕೊಳ್ಳಲು ಹಣಜಮೆ ಮಾಡಿದ 45 ದಿನಗಳ ಒಳಗಾಗಿ ಅರ್ಜಿಯನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಬೇಕಾಗಿರುತ್ತದೆ. ಅರ್ಜಿ ಜೊತೆಯಲ್ಲಿ ಎಲ್ಲಾ ಮೂಲ ಪ್ರತಿಗಳನ್ನು ಸಲ್ಲಿಸಬೇಕಾಗಿರುತ್ತದೆ. (ಬ್ಯಾಂಕ್ ಖಾತೆಯ ಮೂಲ ಪ್ರತಿಗಳೊಂದಿಗೆ) ಅವಧಿ ಮೀರಿ ಅರ್ಜಿ ಸಲ್ಲಿಸಿದ್ದಲ್ಲಿ ಆಯಾ ವಿಭಾಗದ ಮುಖ್ಯಸ್ಥರ ಹಂತದಲ್ಲಿಯೇ ಅರ್ಜಿಯನ್ನು ತಿರಸ್ಕರಿಸ ಬೇಕಾಗಿರುತ್ತದೆ.

2) ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು, ಅರ್ಜಿದಾರರು ಸಲ್ಲಿಸಿರುವ ಪೂರ್ಣ ದಾಖಲೆಗಳನ್ನು ಸದರಿ ವಿಷಯಕ್ಕೆ ಮಾತ್ರವೇ ಸಲ್ಲಿದ್ದಾರೆಯೆ ಇಲ್ಲವೇ ಎಂದು ಸರಿಯಾಗಿ ಪರಿಶೀಲಿಸಿ ಖಾತರಿ ಪಡಿಸಿಕೊಂಡು ದೃಢೀಕರಣದೊಂದಿಗೆ. ಕುಲಪತಿಗಳ ಅನುಮೋದನೆ ಪಡೆದು ಆದೇಶದ ಪ್ರತಿಯೊಂದಿಗೆ ಹಣಕಾಸು ವಿಭಾಗಕ್ಕೆ ಕಡತವನ್ನು ಸಲ್ಲಿಸಬೇಕಾಗಿರುತ್ತದೆ.



Scanned with CamSca

3) ಮರುಪಾವತಿಯ ಮೊತ್ತವನ್ನು ನೇರವಾಗಿ ಸಂಬಂಧಪಟ್ಟ ಅರ್ಜಿದಾರರ ಖಾತೆಗೆ ಹಣ ಜಮಾ ಮಾಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

4) ಹೆಚ್ಚುವರಿ ಹಣವನ್ನು ಹಿಂದಿರುಗಿಸುವ ಸಂದರ್ಭದಲ್ಲಿ ಶೇಕಡ 10% ರಷ್ಟು (Processing) ಆಡಳಿತಾತ್ಮಕ ವೆಚ್ಚವನ್ನು ಕಡಿತಗೊಳಿಸಿ ಬಾಕಿ ಮೊತ್ತ ನೀಡಬೇಕಾಗಿರುತ್ತದೆ.

5) ಮುಖ್ಯವಾಗಿ ಥಿಯರಿ (Theory) ಪರೀಕ್ಷೆ ಸಲುವಾಗಿ ವಿದ್ಯಾರ್ಥಿಗಳು ಹಣವನ್ನು ಕಾಲೇಜಿಗೆ ಸಂದಾಯ ಮಾಡಿದ ಮೊತ್ತವನ್ನು ಕಾಲೇಜಿನವರು ವಿಶ್ವವಿದ್ಯಾಲಯಕ್ಕೆ ಜಮೆ ಮಾಡಿದ ಬಳಿಕ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿ ಅಥವಾ ಹಾಜರಾಗದೇ ಗೈರುಹಾಜರಾಗಲಿ ಹಣವನ್ನು ಹಿಂದಿರುಗಿಸಲು ಅಥವಾ ಹೊಂದಾಣಿಕೆ ಮಾಡಿಕೊಳ್ಳಲು ಬರುವುದಿಲ್ಲ. ಅಂತಹ ಸಂದರ್ಭದಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಸಂಬಂಧಪಟ್ಟ ವಿಭಾಗದ ಅಧಿಕಾರಿಗಳು ನೇರವಾಗಿ ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

6) ವಿದ್ಯಾರ್ಥಿಗಳ ನಿರ್ಲಕ್ಷ್ಯದಿಂದ ಆನ್‌ಲೈನ್‌ನಲ್ಲಿ ತಪ್ಪಾಗಿ ಬೇರೆ ಕಾಲೇಜಿನ ಹೆಸರು ಹಾಗೂ ವಿದ್ಯಾರ್ಥಿಯ ಹೆಸರು ನಮೂದಿಸಿ ಹಣಜಮೆ ಮಾಡಿದ ಮೊತ್ತವನ್ನು ಹಿಂದಿರುಗಿಸಲು ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ಹಣ ಹಿಂದಿರುಗಿಸಲು ಬರುವುದಿಲ್ಲವೆಂದು ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

7) ವಿದ್ಯಾರ್ಥಿಗಳು ಬ್ಯಾಂಕ್ ಮುಖೇನ ಯಾವುದೇ ಪ್ರಮಾಣ ಪತ್ರಗಳನ್ನು ವಿಶ್ವವಿದ್ಯಾಲಯದಿಂದ ಪಡೆಯಲು ಶುಲ್ಕ ಪಾವತಿಸಿದ್ದು, ಸದರಿ ಸೇವೆಯನ್ನು ವಿಶ್ವವಿದ್ಯಾಲಯದಿಂದ ಪಡೆದಿರುವುದಿಲ್ಲವೆಂದು ಶುಲ್ಕವನ್ನು ಹಿಂಪಾವತಿಸುವಂತೆ ಬ್ಯಾಂಕ್‌ಗೆ ವಿದ್ಯಾರ್ಥಿಗಳು ಮನವಿ ಮಾಡಿದಂತಹ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಬ್ಯಾಂಕ್‌ನವರು ಶುಲ್ಕವನ್ನು ಹಿಂಪಾವತಿಸದೇ ತಿರಸ್ಕರಿಸಬೇಕು.

**ಸಂದರ್ಭ-2**

ಕಾಲೇಜುಗಳು ತಪ್ಪಾಗಿ ಒಂದೇ ವಿಷಯಕ್ಕೆ ಒಂದಕ್ಕಿಂತ ಹೆಚ್ಚು ಬಾರಿ ವಿವಿಧರೀತಿಯ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಪಾವತಿ ಮಾಡಿ ಮರುಪಾವತಿಗಾಗಿ ಅರ್ಜಿ ಸಲ್ಲಿಸಿದಾಗ ಕೈಗೊಳ್ಳಬೇಕಾಗಿರುವ ಕ್ರಮಗಳು:-

1) ಕಾಲೇಜಿನವರು ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿ ಮಾಡುವ ಸಂದರ್ಭದಲ್ಲಿ ತಾಂತ್ರಿಕ ದೋಷದಿಂದ ಅಥವಾ ಇಂಟರ್‌ನೆಟ್ ದೋಷದಿಂದ ಹಣ ಜಮಾ ಮಾಡಿದ ವಿವರ ಬಾರದೆ ವಿಳಂಬವಾದಲ್ಲಿ ಅಂತಹ ಸಂದರ್ಭದಲ್ಲಿ ಎರಡನೇ ಬಾರಿ ಅಥವಾ ಮೂರನೇ ಬಾರಿ ಒಂದೇ ವಿಷಯಕ್ಕೆ ಹಣವನ್ನು ಜಮೆ ಮಾಡಿರುತ್ತಾರೆ.

2) ಈ ಸಂದರ್ಭದಲ್ಲಿ ಸಂಬಂಧಪಟ್ಟ ಕಾಲೇಜಿನವರು

3) 45 ದಿನದ ಒಳಗೆ ಸಂದಾಯ ಮಾಡಿದ ಮೂಲ ದಾಖಲಾತಿಗಳನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಬೇಕಾಗಿರುತ್ತದೆ. ಅವಧಿ ಮೀರಿ ಬಂದ ಅರ್ಜಿಯನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ತಿರಸ್ಕರಿಸಬೇಕಾಗಿರುತ್ತದೆ. ಸಲ್ಲಿಸಿರುವ ದಾಖಲೆಗಳು ಸರಿಯಿದ್ದಲ್ಲಿ ಒಂದು ಬಾರಿ ಪಾವತಿಸಿದ ಮೊತ್ತವನ್ನು ಬಿಟ್ಟು ಬಾಕಿ ಹೆಚ್ಚುವರಿ ಮೊತ್ತದಲ್ಲಿ ಶೇಕಡ 10% ರಷ್ಟು



Scanned with CamSca

(Processing) ಆಡಳಿತಾತ್ಮಕ ವೆಚ್ಚವನ್ನು ಕಡಿತಗೊಳಿಸಿ ಉಳಿಕೆ ಮೊತ್ತವನ್ನು ನೀಡಲು ಮಾನ್ಯ ಕುಲಪತಿಗಳ ಅನುಮೋದನೆ ಪಡೆಯಬೇಕಾಗಿರುತ್ತದೆ.

4) ಸರ್ಕಾರದಿಂದ ಹಾಗೂ ಪ್ರಾಧಿಕಾರದಿಂದ ಅನುಮೋದಿತ ಸೀಟುಗಳಿಗಿಂತ ಹೆಚ್ಚಿನ ಸೀಟುಗಳ ಸಂಯೋಜನೆಗಾಗಿ ಕಾಲೇಜು ಆಡಳಿತದವರು ಪಾವತಿ ಮಾಡಿದ ಮೊತ್ತವನ್ನು ಹಿಂದಿರುಗಿಸಲು ಕಾಲೇಜಿನವರು 45 ದಿನಗಳಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ನಿಗದಿತ ಅವಧಿಯಲ್ಲಿ ಅರ್ಜಿ ಸಲ್ಲಿಸದೆ ಇದ್ದಲ್ಲಿ ಹಾಗೂ ತದನಂತರ ಸಲ್ಲಿಸಿದ ಅರ್ಜಿಗಳನ್ನು ಸಂಬಂಧಪಟ್ಟ ವಿಭಾಗದ ಅಧಿಕಾರಿಗಳು ತಿರಸ್ಕರಿಸತಕ್ಕದ್ದು.

5) ವಿಶ್ವವಿದ್ಯಾಲಯದ ಆದೇಶದ ಮೇರೆಗೆ ಹಣ ಜಮಾ ಮಾಡಿದ್ದಲ್ಲಿ, ಅದರ ಮೂಲ ದಾಖಲೆಗಳನ್ನು ಸಂಬಂಧಪಟ್ಟ ವಿಭಾಗ ಮುಖ್ಯಸ್ಥರು ಪರಿಶೀಲಿಸಿ ಸರಿಯಿದ್ದಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಹಣ ಹಿಂದಿರುಗಿಸಲು ತಮ್ಮ ದೃಢೀಕರಣದೊಂದಿಗೆ ಹಣಕಾಸು ವಿಭಾಗಕ್ಕೆ ಕಡತವನ್ನು ಸಲ್ಲಿಸಬೇಕಾಗಿರುತ್ತದೆ. ದಾಖಲೆಗಳು ಹಾಗೂ ವಿಶ್ವವಿದ್ಯಾಲಯದ ಅನುಮತಿ ಇಲ್ಲದೆ ಹಣ ಪಾವತಿ ಮಾಡಿದರೆ ಅಂತಹ ಹಣ ಹಿಂದಿರುಗಿಸಲು ಬರುವುದಿಲ್ಲವೆಂಬ ಅಂಶವನ್ನು ತಿಳಿಸಬೇಕಾಗಿರುತ್ತದೆ.

6) ಕಾಲೇಜು ಆಡಳಿತದವರು ನಿರ್ಲಕ್ಷದಿಂದ ಹಣವನ್ನು ಆನ್‌ಲೈನ್‌ನಲ್ಲಿ ಬೇರೆ ಕಾಲೇಜುಗಳ ಹೆಸರಿನಲ್ಲಿ ಹಣ ಪಾವತಿ ಮಾಡಿದ್ದಲ್ಲಿ ಅಥವಾ ಬೇರೆ ಹೆಸರಿನಲ್ಲಿ ಹಣಜಮೆ ಮಾಡಿದ್ದಲ್ಲಿ ಅಂತಹ ಸಂದರ್ಭದಲ್ಲಿ ಹಣ ಮರುಪಾವತಿಸಲು ಬರುವುದಿಲ್ಲವೆಂದು ಸಂಬಂಧಪಟ್ಟ ವಿಭಾಗದ ಅಧಿಕಾರಿಗಳು ಸಂಬಂಧಪಟ್ಟ ಕಾಲೇಜಿನವರಿಗೆ ವಿವರಣೆ ನೀಡತಕ್ಕದ್ದು.

7) ಕಾಲೇಜುಗಳಿಗೆ ಹಣ ಹಿಂದಿರುಗಿಸುವ ಸಂದರ್ಭದಲ್ಲಿ ಆಂತರಿಕ ಲೆಕ್ಕ ಪರಿಶೋಧನಾ ವಿಭಾಗದಿಂದ ಪರಿಶೀಲನೆ ಮಾಡಿ ಬಾಕಿ ಮೊತ್ತ ವಸೂಲಿಗೆ ಸೂಚಿಸಿದ್ದಲ್ಲಿ, ಅಂತಹ ಮೊತ್ತವನ್ನು ಸಂಬಂಧಪಟ್ಟ ಕಾಲೇಜಿಗೆ ಹಿಂದಿರುಗಿಸುವ ಸಂದರ್ಭದಲ್ಲಿ ಕಡಿತಗೊಳಿಸಿ ಬಾಕಿ ಮೊತ್ತವನ್ನು ನೀಡಬಹುದಾಗಿರುತ್ತದೆ.

8) ಸಂಯೋಜನೆ ವಿಭಾಗಕ್ಕೆ ಸಂಬಂದಿಸಿದಂತೆ ವಿಶ್ವವಿದ್ಯಾಲಯದಿಂದ ಬಿಡುಗಡೆಯಾದ ಅಧಿಸೂಚನೆಯ ಸಂಖ್ಯೆ: RGUHS / Revised of fees-437/2009-10 ದಿನಾಂಕ:12-08-2015 ರಲ್ಲಿ ಮಾರ್ಗ ಸೂಚಿಯನ್ನು ನೀಡಿರುವಂತೆ ಮುಂದುವರಿಸ ಬಹುದಾಗಿರುತ್ತದೆ.

9) ಹಣ ಪಾವತಿಸಿದ 45 ದಿನಗಳ ತದನಂತರ ದಿನಗಳಲ್ಲಿ ಬಂದ ಹಿಂಪಾವತಿಯ ಅರ್ಜಿಯನ್ನು ಸಂಬಂಧಪಟ್ಟ ವಿಭಾಗದ ಅಧಿಕಾರಿಗಳು ತಿರಸ್ಕರಿಸತಕ್ಕದ್ದು.

10) ಅರ್ಜಿಯನ್ನು ಸಂಬಂಧಪಟ್ಟ ವಿಭಾಗ ಮುಖ್ಯಸ್ಥರಾದ ಮಾನ್ಯ ಕುಲಸಚಿವರು ಮತ್ತು ಮಾನ್ಯ ಕುಲಸಚಿವರು (ಮೌಲ್ಯಮಾಪನ) ರಾ.ಗಾ.ಆ.ವಿ.ವಿ ಬೆಂಗಳೂರು ಇವರಿಗೆ ಸಲ್ಲಿಸಬೇಕು.

11) ಸಂಯೋಜನೆ / ಪ್ರವೇಶಾತಿ ವಿಭಾಗಕ್ಕೆ ಸಂಬಂದಿಸಿದ ಹಿಂಪಾವತಿಯ ಅರ್ಜಿಗಳನ್ನು ಮಾನ್ಯ ಕುಲಸಚಿವರ ಹಾಗೂ ಪರೀಕ್ಷಾ ಕಾರ್ಯಗಳಿಗಾಗಿ ಸಂಬಂದಿಸಿದ ಅರ್ಜಿಗಳನ್ನು ಮಾನ್ಯ ಕುಲಸಚಿವರು (ಮೌಲ್ಯಮಾಪನ)ರವರ ಶಿಫಾರಸ್ಸು ಪಡೆಯತಕ್ಕದ್ದು.



Scanned with CamSca

12) ಯಾವುದೆ ಹಿಂಪಾವತಿಯ ಮೊತ್ತವನ್ನು ಹಿಂದಿರುಗಿಸಲು ಮಾನ್ಯ ಕುಲಪತಿಗಳ ಅನುಮೋದನೆ ಅತ್ಯಗತ್ಯವಾಗಿರುತ್ತದೆ.

ಕುಲಸಚಿವರು

ಪ್ರತಿಯನ್ನು:-

1. ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳ ಮುಖ್ಯಸ್ಥರುಗಳು
2. ಹಣಕಾಸು ಅಧಿಕಾರಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು
3. ಉಪಕುಲಸಚಿವರು, ಪ್ರವೇಶಾತಿ ಹಾಗೂ ಸಂಯೋಜನೆ ವಿಭಾಗ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

Scanned with CamSca